ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 38॥ UDP/1263/2018-20 || R.NO.50495/91 ॥ ತಾರೀಕು : 30–10–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಲೋಕಸಭಾ ಉಪ ಚುನಾವಣೆ ಬೈಂದೂರು ನಿರ್ಣಾಯಕ

ಬೈಂದೂರು– ಶಿವಮೊಗ್ಗ ಲೋಕಸಭಾ ಉಪ ಚುನಾವಣೆ ಪ್ರಚಾರದ ಬಿರುಸು ಅಂತಿಮ ಹಂತ ತಲುಪಿದ್ದು ಬೈಂದೂರು ಕ್ಷೇತ್ರಕ್ಕೆ ಬಹಳಷ್ಟು ರಾಜಕೀಯ ನಾಯಕರು ಭೇಟಿ ನೀಡಿ ಕಾರ್ಯಕರ್ತರ ಸಮಾವೇಶಗಳಲ್ಲಿ ಮಾತನಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರೂ ಬೈಂದೂರಿಗೆ ಆಗಮಿಸಿ ಮಧು ಬಂಗಾರಪ್ಪನವರನ್ನು ಗೆಲ್ಲಿಸುವಂತೆ ಪ್ರೇರಣೆ ತುಂಬಿದ್ದಾರೆ.

ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಆಗಮಿಸಿ ಬೈಂದೂರು ಕ್ಷೇತ್ರ ಅಭ್ಯರ್ಥಿ ಬಿವೈ ರಾಘವೇಂದ್ರರ ಗೆಲುವಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ಹುರಿದುಂಬಿಸಿ ಹೋಗಿದ್ದಾರೆ.

ಯಡಿಯೂರಪ್ಪನವರ ಶಿಕಾರಿಪುರ ಹಾಗೂ ಬಿ.ಎಂ.ಸುಕುಮಾರ ಶೆಟ್ಟಿಯವರ ಬೈಂದೂರು ವಿಧಾನಸಭಾ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಮತಗಳು ಬಿದ್ದಷ್ಟು ಬಿಜೆಪಿಗೆ ಅನುಕೂಲ ಎಂಬ ಭಾವನೆ ಇದೆ.

ಬೈಂದೂರು ಕ್ಷೇತ್ರ ಹಲವು ರಾಜಕೀಯ ನಾಯಕರು, ಮಾಜಿ ಶಾಸಕರು, ಸಂಸದರು,



SHIMOGA

ವಿಧಾನ ಪರಿಷತ್ ಸದಸ್ಯರು , ಜಿ.ಪ.ಸದಸ್ಯರು ಎಲ್ಲರಿಗೂ ಸವಾಲಾಗಿದೆ. ಕೆಲವಾರು ಗ್ರಾಮಗಳಿಗೆ ಉಸ್ತುವಾರಿಯಾಗಿ ನಾಯಕರನ್ನು ನೇಮಿಸಲಾಗಿದ್ದು ಅವರಿಗೆ ನೀಡಿದ ಗ್ರಾಮಗಳಲ್ಲಿ ಪಕ್ಷಕ್ಕೆ ಹೆಚ್ಚು ಮತ ಒದಗಿಸಿಕೊಡಬೇಕಾದ ಜವಾಬ್ದಾರಿ ಬಿದ್ದಿದೆ. ಹಾಗಾಗಿ ಕೆಲವರು ಸ್ಥಳದಲ್ಲೇ ಬೀಡು ಬಿಟ್ಟಿದ್ದಾರೆ.

ಜೆಡಿಎಸ್ ಚಿಹ್ನೆಗೆ ಕಾಂಗ್ರೆಸಿನ ಎಷ್ಟು ಮತಗಳು ಬೀಳುತ್ತವೆ ಎನ್ನುವುದರಲ್ಲಿ ಮೈತ್ರಿ ಅಭ್ಯರ್ಥಿಯ ಗೆಲುವು ನಿಶ್ಚಯವಾಗಲಿದೆ.

ಜಾತಿವಾರು ಲೆಕ್ಕದಲ್ಲಿ ಅಭ್ಯರ್ಥಿಯ ಗೆಲುವು ನಿಶ್ಚಯವಾಗಲಿದೆ ಎಂಬ ಅನಿಸಿಕೆಗಳು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುಳ್ಳಾಗಿದೆ. ಗೋಪಾಲ ಪೂಜಾರಿ ನಿರೀಕ್ಷೆಗಿಂತ ಹೆಚ್ಚು ಮತಗಳಿಂದ ಹಿಂದೆ ಬಿದ್ದಿರುವುದು ಇದಕ್ಕೆ ಸಾಕ್ಷಿ. ಮಧು ಬಂಗಾರಪ್ಪ ಪರ ಬಿಲ್ಲವರ ಮತಗಳನ್ನು ಕ್ರೋಢೀಕರಿಸಲು ಪ್ರಯತ್ನ ನಡೆದಿದೆಯಾದರೂ ಅದು ಎಷ್ಟರ ಮಟ್ಟಿಗೆ ಯಶಸ್ವಿಯಾದೀತು ಎನ್ನುವುದೇ ಯಕ್ಷಪ್ರಶ್ನೆ.

ಬೇಕಾಗಿದ್ದಾರೆ
• ಅಡುಗೆಯವರು
• ವಾರ್ಡನ್ಸ್
• ಅಸಿಸ್ಟೆಂಟ್ ವಾರ್ಡನ್ಸ್
• ಅಟೆಂಡರ್ಸ್
• ಹೆಲ್ಪರ್ಸ್
ಪರವೂರಿನ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆಯಿದೆ ಹಾಗೂ ಉತ್ತಮ ಸಂಬಳ ಕೊಡಲಾಗುವುದು.
ಸಂಪರ್ಕಿಸಿರಿ:
ಬ್ರಿಲಿಯಂಟ್ ಪಿ.ಯು. ಕಾಲೇಜು
3ನೇ ಮಹಡಿ, ಪಿವಿಎಸ್ ಸೆಂಚುರಿ ಬಿಲ್ಡಿಂಗ್, ಪಿವಿಎಸ್ ಸರ್ಕಲ್ ಹತ್ತಿರ, ಕೊಡಿಯಾಲಬೈಲ್, ಮಂಗಳೂರು. ಫೋನ್: 0824-2495995, 4256995

## ಕುಂದಾಪುರದಲ್ಲಿ ದಿ ಕೆಬೆಲೊ



ಮಕ್ಕಳು, ಯುವಕ, ಯುವತಿಯರು ಪುರುಷರು, ಮಹಿಳೆಯರು ಎಲ್ಲರಿಗೂ ಅನುಕೂಲವಾಗಿರುವ ಸುಸಜ್ಜಿತ ಫ್ಯಾಮಿಲಿ ಸೆಲೂನ್ "ದಿ ಕೆಬೆಲೊ" ಕುಂದಾಪುರದಲ್ಲಿ ಆರಂಭಗೊಂಡಿದೆ. ಕುಂದಾಪುರ ತಾಲ್ಲೂಕಿನಲ್ಲಿ ಪ್ರಥಮದ್ದಾಗಿರುವ ಈ ಸರ್ವಸುಸಜ್ಜಿತ, ಅತ್ಯಾಧುನಿಕ ವ್ಯವಸ್ಥೆಯ ಫ್ಯಾಮಿಲಿ ಸೆಲೂನ್‌ನಲ್ಲಿ ಸಾಮಾನ್ಯರಿಂದ ಹಿಡಿದು ಸಿರಿವಂತರ ತನಕ ಎಲ್ಲ ಗ್ರಾಹಕರಿಗೂ ಅನುಕೂಲವಾಗಿರುವ ಸೇವಾ ಸೌಲಭ್ಯಗಳಿವೆ.

(8ನೇ ಪುಟಕ್ಕೆ)

